**O.S .No.  144/2019 -- PW -1**
**ಸಾಕ್ಷಿಯನ್ನು ಕರೆಸಲಾಯಿತು ಪ್ರಮಾಣ ವಚನ ಮಾಡಿಸಲಾಯಿತು**

**ದಿ:16-07-2024**

**ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಎಲ್.ಎನ್. ವಕೀಲರಿಂದ**

ನನ್ನ ಸ್ವಂತ ಊರು ಮಲಗಳಲೆ ಗ್ರಾಮ ಆಗಿರುತ್ತದೆ . ನನ್ನ ತಂದೆಗೆ ನಾವು 6 ಜನ ಮಕ್ಕಳು ಇರುತ್ತೇವೆ. ನಾವೆಲ್ಲರೂ ಜೀವಂತವಾಗಿ ಇರುತ್ತೇವೆ. ನಮಗೆ ಮಲಗಳಲೆ ಯಲ್ಲಿ 10 ಎಕರೆ ಜಮೀನು ಇರುತ್ತದೆ. ಅದು ನಮ್ಮ ತಂದೆ ಖರೀದಿ ಮಾಡಿರುವ ಜಮೀನು ಆಗಿರುತ್ತದೆ. ನನಗೆ ಆದರ್ಶ ಮತ್ತು ಅನೂಪ ಎಂಬ ಇಬ್ಬರು ಮಕ್ಕಳು ಇರುತ್ತಾರೆ. ಮಾಗರಹಳ್ಳಿಯ ನಮ್ಮ  ಜಮೀನು ಒಂದು ಎಕರೆ ಐದು ಗುಂಟೆ ಆಸ್ತಿ ಮುಳುಗಡೆ ಆಗಿದ್ದರಿಂದ ದಾವಾ ಆಸ್ತಿ ನನಗೆ ಮಂಜೂರು ಆಗಿರುತ್ತದೆ.  ಮುಳುಗಡೆ ಆದ ಆಸ್ತಿ ನನ್ನ ಅಜ್ಜ ಚನ್ನೇಗೌಡ ರವರ ಹೆಸರಿನಲ್ಲಿ ಇತ್ತು. ನನ್ನ ತಂದೆಯ ಹೆಸರು ಬಸಪ್ಪಗೌಡ ಎಂದು ಇರುತ್ತದೆ. ಮುಳುಗಡೆ ಆದ ಜಮೀನಿನ ಸ.ನಂ.01/8, ಸ.ನಂ.1 ಮತ್ತು 2 ಆಗಿರುತ್ತದೆ. 2015 ರಲ್ಲಿ ಮುಳುಗಡೆ ಆಗಿರುತ್ತದೆ. ಹೊಳೆಯ ಉದ್ದೇಶದಿಂದ ಆಸ್ತಿ ಮುಳುಗಡೆ ಆಗಿರುತ್ತದೆ.

2. ದಾವಾ ಆಸ್ತಿಯ ಸ.ನಂ.147 ಆಗಿರುತ್ತದೆ. ಅದು ದುರಸ್ಥು ಆಗಿರುವುದಿಲ್ಲ. ನಮಗೆ ಸ.ನಂ. 147 ಎಂದು ಮಂಜೂರು ಮಾಡಿರುತ್ತಾರೆ. ಸ.ನಂ. 147 ರಲ್ಲಿ ಒಟ್ಟು 13 ಎಕರೆ ಇರುತ್ತದೆ. ಅದರಲ್ಲಿ ಯಾರು ಯಾರಿಗೆ ಎಷ್ಟು ಜಮೀನು ಇದೆ ಎಂದು ನನಗೆ ಗೊತ್ತಿಲ್ಲ. ನಾನು ದಾಖಾಲಾತಿಗಳನ್ನು ತೆಗೆಸಿ ಯಾರಿಗೆ ಎಷ್ಟು ಜಮೀನು ಇರುತ್ತದೆ ಎಂದು ತಿಳಿದುಕೊಂಡಿಲ್ಲ. ಈ ದಾವೆಯನ್ನು ಸತ್ಯನಾರಾಯಣರವರ ವಿರುದ್ಧ ಹೂಡಿರುತ್ತೇನೆ. ಸುಮಾರು 4-5 ವರ್ಷಗಳ ಹಿಂದೆ ನೋಡಿರುತ್ತೇನೆ. ಅವರಿಗೆ ಈಗ 85 ವರ್ಷ ವಯಸ್ಸು ಆಗಿದೆ ಎಂದರೆ ಸರಿ. ಅವರಿಗೆ ಸ.ನಂ. 147 ರಲ್ಲಿ ಜಮೀನು ಇದೆಯೋ ಇಲ್ಲಯೋ ನನಗೆ ಗೊತ್ತಿಲ್ಲ.

3. ದಾವಾ ಆಸ್ತಿಯನ್ನು ಹೊರತುಪಡಿಸಿ ಬೇರೆ ಆಸ್ತಿಯ ಮಂಜೂರಾತಿಗಾಗಿ ಅರ್ಜಿ ನೀಡಿರುವುದಿಲ್ಲ. 2017 ರಲ್ಲಿ ದಾವಾ ಆಸ್ತಿ ಮಂಜೂರಾತಿಗೆ ಅರ್ಜಿ ನೀಡಿರುತ್ತೇನೆ. 2018 ರಲ್ಲಿ ಮಂಜೂರು ಆಗಿರುತ್ತದೆ. ಮಂಜೂರಾತಿ ಪೂರ್ವದಲ್ಲಿ 2017 ರಲ್ಲಿ ದಾವಾ ಆಸ್ತಿಯನ್ನು ನೋಡಿರುತ್ತೇನೆ. ಆಗ ದಾವಾ ಆಸ್ತಿಯಲ್ಲಿ ಕಾಡು ಜಾತಿಯ ಮರಗಳು ಇದ್ದವು. ಮಂಜೂರಾತಿ ಪೂರ್ವದಲ್ಲಿ ದಾವಾ ಆಸ್ತಿಯ ಸರ್ವೆ ಮಾಡಿಸಿರುತ್ತೇವೆ. ಮಂಜೂರಾತಿ ಪೂರ್ವದಲ್ಲಿ ಸ.ನಂ. 147 ರಲ್ಲಿ ಬೇರೆಯವರಿಗೆ ಮಂಜೂರಾದ ವಿಚಾರ ನನಗೆ ಗೊತ್ತಿಲ್ಲ. ಪ್ರತಿವಾದಿ ಎಲ್ಲಿ ವಾಸಾವಿರುತ್ತಾರೆ ಎಂದು ನನಗೆ ಗೊತ್ತಿಲ್ಲ.

4. ದಾವಾ ಮಾಹಿತಿಗಳನ್ನು ನಮ್ಮ ವಕೀಲರಿಗೆ ನಾನೇ ನೀಡಿರುತ್ತೇನೆ. ಸ.ನಂ. 147 ರಲ್ಲಿ ಪ್ರತಿವಾದಿಗೆ 6 ಎಕರೆ ಜಮೀನು ಮಂಜೂರು ಆಗಿದೆ ಎಂದರೆ ನನಗೆ ಗೊತ್ತಿಲ್ಲ. ನನಗೆ ಮಂಜೂರಾದ ಮಂಜೂರಾತಿ ಪತ್ರವನ್ನು 25.08.2022 ರಲ್ಲಿ ಜಿಲ್ಲಾಧಿಕಾರಿರವರು ವಜಾ ಮಾಡಿರುತ್ತಾರೆ ಎಂದರೆ ಸರಿಯಲ್ಲ. ದಾವಾ ಆಸ್ತಿಯ ಪಹಣಿ ಈಗಲೂ ನನ್ನ ಹೆಸರಿನಲ್ಲಿ ಬರುತ್ತದೆ. ನಾನು ಮೊಸ ಮಾಡಿ ದಾವಾ ಆಸ್ತಿಯನ್ನು ಮಂಜೂರು ಮಾಡಿಸಿಕೊಂಡಿದ್ದು ಈಗ ಅದು ರದ್ದಾಗಿರುತ್ತದೆ ಎಂದರೆ ಸರಿಯಲ್ಲ. ನನ್ನ ಮಗ ಆದರ್ಶ ರವರ ಹೆಂಡತಿ ಹೆಸರು ರಶ್ಮಿ ಎಂದು ಇರುತ್ತದೆ. ಸ.ನಂ. 147 ರಲ್ಲಿ ನನ್ನ ಸೊಸೆ ಹೆಸರಿನಲ್ಲೂ ಸಹ ಜಮೀನು ಇರುತ್ತದೆ ಎಂದರೆ ಸರಿ. ಅವರಿಗೆ ಜಮೀನು ಮುಳುಗಡೆ ಆಗಿ ಮುಂಜೂರಾತಿ ಪ್ರಕಾರ ಬಂದಿರುತ್ತದೆ. ರಶ್ಮಿ ರವರಿಗೆ ಯಾವ ಜಮೀನಿನ ಮುಳುಗಡೆ ಬಾಬ್ತು ಪರಿಹಾರವಾಗಿ ಸ.ನಂ. 147 ರಲ್ಲಿ ಜಮೀನು ಮಂಜೂರು ಆಗಿರುತ್ತದೆ ಎಂದು ನನಗೆ ಗೊತ್ತಿಲ್ಲ.

5. ದಾವಾ ಆಸ್ತಿಯ ಚೆಕ್ಕುಬಂಧಿ ಪೂರ್ವ, ಪಶ್ಚಿಮ ಮತ್ತು ಉತ್ತರಕ್ಕೆ ಸ.ನಂ. 147 ರ ಉಳಿಕೆ ಜಮೀನು ಮತ್ತು ದಕ್ಷಿಣಕ್ಕೆ ಸ.ನಂ. 127 ಇರುತ್ತದೆ. ನಿ.ಪಿ.-2 ರ ನಕಾಶೆಯಲ್ಲಿ ದಕ್ಷಿಣಕ್ಕೆ ಬ್ಯಾಕರವಳ್ಳಿ ಗ್ರಾಮದ ಗಡಿ ನಮೂದಿಸಿದೆ ಎಂದರೆ ಸರಿ. ಅದು ಬ್ಯಾಕರವಳ್ಳಿ-

ಅರೇಕೆರೆ ರಸ್ತೆ ಆಗಿರುತ್ತದೆ ಎಂದರೆ ಸರಿ. ನಮಗೆ ಮಂಜೂರಾದ ಜಮೀನಿಗೆ ಕರ ತುಂಬಿರುವುದಿಲ್ಲ. ನನಗೆ ಪ್ರತಿವಾದಿ ಯಾರು ಎಂದು ಗೊತ್ತಿಲ್ಲದೇ ಇದ್ದರೂ ಸಹ ಅವರ ವಿರುದ್ಧ ಸುಳ್ಳು ದಾವಾ ಹೂಡಿರುತ್ತೇನೆ ಎಂದರೆ ಸರಿಯಲ್ಲ. ಈ ದಾವೆಯನ್ನು ನಮ್ಮ ಜಮೀನು ಮುಳುಗಡೆ ಆಗಿದ್ದರಿಂದ ದಾವಾ ಆಸ್ತಿಗೆ ತೊಂದರೆ ಕೊಡುತ್ತಿದ್ದರಿಂದ ಹೂಡಿರುತ್ತೇವೆ. ಯಾರು ತೊಂದರೆ ಕೊಡುತ್ತಿರುತ್ತಾರೆ ಎಂದರೆ ಸಾಕ್ಷಿ ಮೌನಕ್ಕೆ ಶರಣಾಗುತ್ತಾರೆ. ದಾವಾ ಆಸ್ತಿಯ ಸರ್ವೆ ನಕಾಶೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇವೆ. 2-3 ವರ್ಷಗಳಿಂದ ಸರ್ವೆ ಆಗಿರುತ್ತದೆ. ಆ ಸಮಯದಲ್ಲಿ ಅಕ್ಕಪಕ್ಕದವರಿಗೆ ನೋಟಿಸ್ ನೀಡಿರುತ್ತಾರೆ. ಯಾರಿಗೆ ನೋಟೀಸ್ ನೀಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಸರ್ವೆ ಸಮಯದಲ್ಲಿ ಅವರು ಹಾಜರು ಇರಲಿಲ್ಲ. ಸರ್ವೆ ಆದ ಬಗ್ಗೆ ಮಹಜರನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ.

6. ಈಗ ದಾವಾ ಆಸ್ತಿಯಲ್ಲಿ ಯಾವುದೇ ಬೆಳೆ ಇರುವುದಿಲ್ಲ, ಖಾಲಿ ಇರುತ್ತದೆ. ದಾವಾ ಆಸ್ತಿಯಲ್ಲಿ ಬೆಳೆ ಹಾಕಲು ಪ್ರಯತ್ನ ಮಾಡಿರುತ್ತೇವೆ ಎಂದು ನನ್ನ ದಾವೆಯಲ್ಲಿ ಬರೆಸಿರುತ್ತೇನೆ. ಪ್ರತಿವಾದಿಯ ತಕರಾರನ್ನು ಓದಿ ತಿಳಿದುಕೊಂಡಿರುವುದಿಲ್ಲ.

**ಮುಂದುವರೆದ ಪಾಟೀಸವಾಲ್‌ಗೆ ಕಾಲಾವಕಾಶ ಕೋರಿದ್ದು, ನೀಡಿ ಮುಂದೂಡಲಾಯಿತು.**

**ಉಕ್ತ ಲೇಖನದಂತೆ ಮುಕ್ತ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.**

**ಓ ಹೆ ಕೇ ಸ ಇ**

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ ಸಕಲೇಶಪುರ